# LS speaker addresses joint sitting, laments lack of discussion on laws

## Citing Departure From Norm, Cong Boycotts Event

Times News Network

Bengaluru: Lok Sabha speaker Om Birla on Friday expressed deep concern over the diminishing quality of debates in legislatures, lack of members' participation in the law-making process and increasing instances of disruption.

He addressed a joint session of the Karnataka legislature on the topic of 'Democracy – Safeguarding Parliamentary Values'. The monsoon session of the state legislature ended on Friday.

Birla said that protests and disruptions in the House would prevent lawmakers from raising issues of public interest and lead to the passage of important laws without much discussion. The comments come in the wake of repeated interruptions in the recent sessions of Parliament and various state assemblies.

This is the first time that a Lok Sabha speaker has addressed a joint sitting of the Karnataka legislature. Congress boycotted the event, with Karnataka Congress chief DK Shivakumar contending that there was no provision for anyone other than the President and the governor to address state legislators.





Pics: TOI

MOMENT OF PRIDE: (Left) Om Birla presents the 'Best MLA' award to former CM BS Yediyurappa on Friday

Siddaramaiah, the opposition leader in the assembly, said: "The BJP government is setting a wrong precedent in the assembly. It has never happened before."

Birla said that it was the duty of members, especially MLAs, to have extensive discussions on laws being framed so that no questions could be raised later. "For any democracy, debates, discussions and differences of opinion are healthy signs as long as they are within the purview of the rules of procedures and do not affect the dignity of the legislature. If we cross these limits, then people will lose faith in the system," he added.

He also urged legislators to uphold democratic ideals and values, make the functioning of the House more transparent and be answerable to people.

Legislative council chairman Basavaraj Horatti expressed concern over the growing tendency of ruling parties to promulgate ordinances by bypassing legislatures. "Bills are being approved without discussions and through the ordinance route. Ordinances are promulgated under inevitable circumstances. This practice will undermine the importance of the legislature," he said.

He requested the central government to name one of the buildings in the new Parliament complex being constructed in Delhi as Anubhava Mantapa as a mark of respect for 12th-century social reformer Basavanna. Anubhava Mantapa is considered to be the country's first Parliament based on the principles of democracy.

Horatti, who has already written to Prime Minister Narendra Modi, handed over a petition to Birla. Assembly speaker Vishweshwar Hegde Kageri stressed on the need for preventing erosion of values in the parliamentary, democratic set-up before people lost confidence in the system. "We have been witnessing the erosion of values in all the four pillars of democracy — legislature, executive, judiciary and media. There is an urgent need for introspection from all concerned," he said.

Kageri expressed disappointment over the Congress decision to boycott the address of the Lok Sabha speaker. Meanwhile, JD(S) MLA K Annadani raised pro-Kannada slogans in the assembly, protesting Birla's speech in Hindi. He alleged that the central government was imposing Hindi on states.

## BSY WINS BEST MLA AWARD

The assembly on Friday gave its first-ever 'Best MLA' award to former chief minister BS Yediyurappa, recognising his long stint in electoral politics and strong performance as a member of the House. Yediyurappa represents the Shikaripura assembly constituency in Shivamogga.

Speaker Vishweshwar Hegde Kageri said that the award had been instituted on the suggestions of Lok Sabha speaker Om Birla, who had said that all legislative assemblies and councils should honour their best members.

"Considering the valuable contribution made by Yediyurappa to the proceedings of the assembly, his name was chosen for the maiden award," Kageri added. Birla presented the award, which carries a citation, to Yediyurappa.

On Birla's suggestion, a committee has been formed under Kageri's chairmanship to select the best MLA every year. The committee will include the chief minister and law & parliamentary affairs minister and members from opposition parties. The award will be given to members of the House excluding ministers.

Yediyurappa served as the chief minister four times; he stepped down on July 26. He was first elected to the assembly in 1983 and was a member of the legislative council and Lok Sabha. TNN

# ವಿಧಾನಸೌಧ ಪ್ರಜಾಪ್ರಭುತ್ವದ ವಿಶಿಷ್ಟ ಸಂಕೇತ: ಓಂ ಬಿರ್ಲಾ



ಬೆಂಗಳೂರು: ಜಂಟಿ ಸಭೆಯಲ್ಲಿ ಭಾಗ ವಹಿಸುತ್ತಿರೋದು ನನಗೆ ತುಂಬಾ ಸಂತೋಷವಾಗಿದೆ. ಇಲ್ಲಿನ ವಿಧಾನಸೌಧ ಕಟ್ಟಡವು ಪ್ರಜಾಪ್ರಭುತ್ವದ ವಿಶಿಷ್ಟ ಸಂಕೇತ. ಅದು ಜನರ ಆಶಯಗಳು ಮತ್ತು ಆಕಾಂಕ್ಷೆಗಳನ್ನು ಪ್ರತಿಬಿಂಬಿಸುತ್ತದೆ. ಈ. ಐತಿಹಾಸಿಕ ಕಟ್ಟಡ ಮತ್ತು ಪ್ರಜಾಪ್ರಭುತ್ವದೊಂದಿಗಿನ ಅದರ ಸುದೀರ್ಘ ಪ್ರಯಾಣವು ನಮಗೆ ಹೊಸ ಸ್ಫೂರ್ತಿ ನೀಡುತ್ತದೆ. ವಿಧಾನಸೌಧವು, ರಾಜ್ಯಕ್ಕೆ ಭೇಟಿ ನೀಡುವ ದೇಶಿಯ ಮತ್ತು ವಿದೇಶಿ ಪ್ರವಾಸಿಗರ ಮೇಲೆ ಪ್ರಜಾಪ್ರಭುತ್ವ ಮೌಲ್ಯಗಳನ್ನು ಅಳವಡಿಸಿಕೊಳ್ಳುವಲ್ಲಿ ಸ್ಫೂರ್ತಿ ನೀಡುತ್ತದೆ ಎಂದು ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಹೇಳಿದರು.

ಶುಕ್ರವಾರ ರಾಜ್ಯದ ಎರಡು ಸದನಗಳನ್ನು ಉದ್ದೇಶಿಸಿ ಮಾತನಾಡಿದ ಸ್ಪೀಕರ್ ಓಂ ಬಿರ್ಲಾ ಅವರು, ಕರ್ನಾಟಕ ಶ್ರೀಮಂತ ಮತ್ತು ಅದ್ಭುತ ಇತಿಹಾಸ ಹೊಂದಿದೆ. ಭಗವಾನ್ ಬಸವೇಶ್ವರ 12ನೇ ಶತಮಾನದಲ್ಲಿ ನಿರ್ಮಿಸಿದ ಅನುಭವ ಮಂಟಪ ಪ್ರಸ್ತುತ ಸಂದರ್ಭದಲ್ಲಿ ಜನಪ್ರತಿನಿಧಿಗಳ ಸಂಸತ್ತಿನ ಪ್ರತಿಬಿಂಬವಾಗಿದೆ. ರಾಣಿ ಚೆನ್ನಮ್ಮನ ಮಹಾನ್ ತ್ಯಾಗವು ನಮಗೆ ಸ್ಫೂರ್ತಿ ನೀಡುತ್ತದೆ. ಕರ್ನಾಟಕ ರಾಜ್ಯದಲ್ಲಿ, ಪ್ರಜಾಪ್ರಭುತ್ವ ಪ್ರಯಾಣವು, ರೋಮಾಂಚಕ ಮತ್ತು ಸ್ಫೂರ್ತಿದಾಯಕವಾಗಿದೆ. ಈ ಭವ್ಯವಾದ ಪ್ರಯಾಣಕ್ಕೆ ಕಾರಣರಾದ ರಾಜಕೀಯ ಮುತ್ಸದ್ದಿಗಳಿಗೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ. ನಾವು ಕೂಡ ಅಂತಹವರಿಂದ ಸ್ಫೂರ್ತಿ ಪಡೆಯಬೇಕು. ಸಂಸದೀಯ ಪ್ರಜಾಪ್ರಭುತ್ವವನ್ನು ಆಡಳಿತ ರೂಪವೆಂದು ಸಾರ್ವತ್ರಿಕವಾಗಿ ಒಪ್ಪಿಕೊಳ್ಳಲಾಗಿದೆ. ಈ ಸನ್ನಿವೇಶದಲ್ಲಿ ನಾವು ಸಂಸದೀಯ ಪ್ರಜಾಪ್ರಭುತ್ವ ಮತ್ತು ಶಾಸಕಾಂಗವನ್ನು ಬಲಪಡಿಸಿದ್ದೇವೆ. ಆಡಳಿತದ ಆಯಾಮಗಳಲ್ಲಿ ಪ್ರಗತಿ ಸಾಧಿಸಿದ್ದೇವೆ. ಪ್ರಜಾಪ್ರಭುತ್ವ ಯಾವಾಗಲೂ ಜನ ಕೇಂದ್ರೀಕೃತವಾಗಿದೆ ಎಂದರು.

ಸಂವಿಧಾನ ನಿರ್ಮಾತೃಗಳು ಸಂವಿಧಾನ ರೂಪಿಸುವಾಗ ಜನರ ಹಿತಾಸಕ್ತಿಗಳನ್ನು ಮುಖ್ಯವಾಗಿ ಗಮನದಲ್ಲಿ ಇಟ್ಟುಕೊಂಡಿದ್ದರು. ಇದರಿಂದಲೇ ದೇಶದಲ್ಲಿ 17 ಸಾರ್ವತ್ರಿಕ ಚುನಾವಣೆಗಳು, ಮತ್ತು 300ಕ್ಕೂ ವಿಧಾನಸಭೆ ಚುನಾವಣೆಗಳು ಯಶಸ್ವಿಯಾಗಿ ನಡೆದಿವೆ. ಮತದಾರರ ಭಾಗವಹಿಸುವಿಕೆಯಲ್ಲಿ ಗಣನೀಯ ಪ್ರಗತಿಯಾಗಿದೆ. ಚುನಾವಣೆ ನಂತರ ಅಧಿಕಾರ ವರ್ಗಾವಣೆ ಅತ್ಯಂತ ಸರಳವಾಗಿ ನಡೆಯುತ್ತಿದೆ.

P7

# ಬಿಎಸ್‌ವೈಗೆ ಅತ್ಯುತ್ತಮ ಶಾಸಕ ಪ್ರಶಸ್ತಿ ಪ್ರದಾನ



ಬೆಂಗಳೂರು: ಲೋಕಸಭೆ ಮಾದರಿಯಂತೆ ಕರ್ನಾಟಕ ವಿಧಾನಸಭೆಯ ಇತಿಹಾಸದಲ್ಲೇ ಮೊದಲ ಬಾರಿಗೆ ಅತ್ಯುತ್ತಮ ಶಾಸಕ ಪ್ರಶಸ್ತಿ ನೀಡಲು ನಿರ್ಧರಿಸಲಾಗಿದ್ದು, ಸ್ಪೀಕರ್ ವಿಶ್ವೇಶರ ಹೆಗಡೆ ಕಾಗೇರಿಯವರು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಅತ್ಯುತ್ತಮ ಶಾಸಕರಾಗಿ ಆಯ್ಕೆ ಮಾಡಿದರು. ಲೋಕಸಭಾ ಸ್ಪೀಕರ್ ಬಿಎಸ್‌ವೈಗೆ ಪ್ರಶಸ್ತಿ ಪ್ರದಾನ ಮಾಡಿದರು.

ಯಡಿಯೂರಪ್ಪ ಅವರನ್ನ ಆಯ್ಕೆ ಮಾಡಿದ ಅವಕಾಶ ನನಗೆ ಸಿಕ್ಕಿದ್ದು ಅತ್ಯಂತ ಗೌರವದ ವಿಚಾರ ಎಂದು ಭಾವಿಸಿದ್ದೇನೆ ಎಂದು ಸಭಾಧ್ಯಕ್ಷ ಕಾಗೇರಿ, ರೈತ ಮುಖಂಡನಾಗಿ, ವಿಪಕ್ಷ ನಾಯಕರಾಗಿ ಮತ್ತು ಸಿಎಂ ಆಗಿ ಅತ್ಯಂತ ಉತ್ತಮ ಕೆಲಸ ಮಾಡಿದ್ದಾರೆ ಎಂದು ಮಾಜಿ ಸಿಎಂ ಬಿಎಸ್‌ವೈ ಅವರನ್ನು ಅತ್ಯುತ್ತಮ ಶಾಸಕ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದರು.

ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಯಡಿಯೂರಪ್ಪಗೆ ಬೆಳ್ಳಿ ಫಲಕ ನೀಡಿ ಗೌರವಿಸುವ ಮೂಲಕ ಪ್ರಶಸ್ತಿ ಪ್ರದಾನ ಮಾಡಿದರು. ಇದೇ ವೇಳೆ ಅವರನ್ನ ಹೊಗಳಿದ ಓಂ ಬಿರ್ಲಾ, ರಾಜ್ಯದಲ್ಲಿ ನಾಲ್ಕು ಬಾರಿ ಸಿಎಂ ಆಗಿ ಆಳ್ವಿಕೆ ಮಾಡಿದ ಬಿಎಸ್‌ವೈ ಸಂಸದೀಯ ಮೌಲ್ಯಗಳನ್ನ ಎತ್ತಿಹಿಡಿದಿದ್ದಾರೆ ಎಂದರು.

■ ಮೊದಲನೇ ಪುಟದಿಂದ...

## ■ ವಿಧಾನಸೌಧ ಪ್ರಜಾಪ್ರಭುತ್ವದ ವಿಶಿಷ್ಟ ಸಂಕೇತ: ಓಂ ಬಿರ್ಲಾ

ಇದಕ್ಕೆ ಕಾರಣ ಪ್ರಜಾಪ್ರಭುತ್ವ ಬಗೆಗಿನ ಬದ್ಧತೆ. ಜನರ ಕಲ್ಯಾಣಕ್ಕೆ ದೇಶದ ಪ್ರಜಾಪ್ರಭುತ್ವ ಸಂಸ್ಥೆಗಳು ಹೆಚ್ಚಿನ ಆದ್ಯತೆ ನೀಡುತ್ತವೆ.

ಶಾಸಕಾಂಗದಲ್ಲಿರುವ ನಾವು ಜನರ ಆಶಯಗಳನ್ನು ಮತ್ತು ಆಕಾಂಕ್ಷೆಗಳನ್ನು ಪೂರೈಸುವ ಮಾಧ್ಯಮವಾಗಿದ್ದು, ಅವುಗಳ ಕಲ್ಯಾಣ ಗುರಿಯಾಗಿಸಿಕೊಂಡು ಕಾನೂನು ರೂಪಿಸುತ್ತೇವೆ. ಆದರೆ ಈಗ ನಾವು ಈ ಪ್ರಯಾಣದ 75 ವರ್ಷಗಳನ್ನು ಪೂರ್ಣಗೊಳಿಸಲಿರುವಾಗ, ಪ್ರಜಾಪ್ರಭುತ್ವ ಸಂಸ್ಥೆಗಳನ್ನು ಜನರಿಗೆ ಇನ್ನಷ್ಟು ಉತ್ತರದಾಯಿಕರನ್ನಾಗಿ ಮಾಡುವುದು ಹೇಗೆ? ಎಂದು ಪರಿಶೀಲಿಸಬೇಕಾಗಿದೆ. ಆಡಳಿತವು ಜನರ ಭಾವನೆಗಳು ಮತ್ತು ಆಕಾಂಕ್ಷೆಗಳೊಂದಿಗೆ ಹೊಂದಿಕೆಯಾಗಿದೆಯಾ ಎಂದು ಖಚಿತಪಡಿಸಿಕೊಳ್ಳಲು ಮತ್ತು ಅವರ ಯೋಗಕ್ಷೇಮವನ್ನು ಖಚಿತಪಡಿಸಿಕೊಳ್ಳಲು ಪ್ರಜಾಪ್ರಭುತ್ವ ಸಂಸ್ಥೆಗಳನ್ನು ಮತ್ತಷ್ಟು ಬಲಪಡಿಸುವ ಅವಶ್ಯಕತೆಯಿದೆ ಎಂದು ಹೇಳಿದರು.

ಸಂಸದೀಯ ಪ್ರಜಾಪ್ರಭುತ್ವವು ಚುನಾಯಿತ ಪ್ರತಿನಿಧಿಗಳ ಜವಾಬ್ದಾರಿಯನ್ನು ಆಧರಿಸಿದೆ. ಚುನಾಯಿತ ಪ್ರತಿನಿಧಿಗಳು ಜನರ ಆಶಯಗಳು ಮತ್ತು ಆಕಾಂಕ್ಷೆಗಳಿಗೆ ಸಂವೇದನಾಶೀಲರಾದಾಗ ಮತ್ತು ಶಾಸಕಾಂಗಗಳ ಮೂಲಕ ಅವುಗಳನ್ನು ಪೂರೈಸಲು ಶ್ರಮಿಸಿದಾಗ ಮಾತ್ರ ಸಂಸತ್ತು ಮತ್ತು ಶಾಸಕಾಂಗದ ಪ್ರತಿಷ್ಠೆಯನ್ನು ಹೆಚ್ಚಿಸಬಹುದು. ನಮ್ಮ ಶಾಸಕಾಂಗಗಳು ಪ್ರಜಾಪ್ರಭುತ್ವದ ಆತ್ಮ, ದೇಶಕ್ಕಾಗಿ ನೀತಿಗಳು ಮತ್ತು ಕಾನೂನುಗಳನ್ನು ರೂಪಿಸುವ ಜವಾಬ್ದಾರಿ ಶಾಸಕಾಂಗಗಳ ಹೆಗಲ ಮೇಲಿದೆ ಎಂದರು. ಸಂವಿಧಾನವನ್ನು ರೂಪಿಸುವಾಗ, ನಮ್ಮ ಶಾಸಕರು ನಮ್ಮ ಜನರ ಸಾಮಾಜಿಕ-ಆರ್ಥಿಕ ಪ್ರಗತಿಯನ್ನು ಖಚಿತಪಡಿಸಿಕೊಳ್ಳಲು ನಮ್ಮ ಶಾಸಕಾಂಗವು ಹೆಚ್ಚು ಅರಿವು, ಶ್ರದ್ಧೆ, ಪ್ರಾಮಾಣಿಕತ ಮತ್ತು ಜವಾಬ್ದಾರಿಯುತವಾಗಿರಬೇಕು ಎಂಬ ಚಿಂತನೆಯೊಂದಿಗೆ ಇದರ ನಿರ್ಮಾತೃಗಳು ಕೆಲಸ ಮಾಡಿದರು. ಶಾಸಕರು ಶಾಸಕಾಂಗ ರೂಪಿಸುವ ಕಾನೂನುಗಳ ಬಗ್ಗೆ ಚರ್ಚೆ, ಚಿಂತನ ಮಂಥನ ನಡೆಸಬೇಕು. ಶಾಸಕಾಂಗಗಳು ರೂಪಿಸುವಲ್ಲಿ ಕಾನೂನು ಪರಿಣಾಮಕಾರಿ, ಸಮರ್ಥ ಇರಬೇಕು. ಆದರೆ ಸದನಗಳಲ್ಲಿ ಅಗತ್ಯ ಪ್ರಮಾಣದ ಚರ್ಚೆ, ಶಾಸಕರ ಭಾಗವಹಿಸುವಿಕೆ ನಡೆಯುತ್ತಿಲ್ಲ, ಇದು ಕಳವಳಕಾರಿ ಸಂಗತಿ. ಸದಸ್ಯರು ಉತ್ತಮ ನಡವಳಿಕೆ, ಸಭ್ಯತೆ, ಪ್ರಬುದ್ಧತೆ, ಔದಾರ್ಯ ಹೊಂದಿರಬೇಕು. ಪ್ರತಿಭಟನೆ ಸದನದ ಘನತೆಗೆ ಅನುಗುಣವಾಗಿ ಇರಬೇಕು. ಸಂಸತ್ತಿನ ನಿಯಮಗಳಿಗನುಸಾರ ಪ್ರತಿಭಟನೆಗಳಿರಬೇಕು ಎಂದರು.